ಮಾಡಲಾಗುತ್ತಿದೆ. ರಾಣೆಬೆನ್ನೂರು ಮತ್ತು ಹಾನಗಲ್ ತಾಲ್ಲೂಕುಗಳಲ್ಲಿ ಜನವರಿ 2002ರ ಅಂತ್ಯದಲ್ಲಿ ಆನ್ ಲೈನ್ ವ್ಯವಸ್ಥೆ ಮಾಡಲಾಗುವುದು. ಹಿರೇಕೆರೂರು ತಾಲ್ಲೂಕಿನಲ್ಲಿ ಫೆಬ್ರುವರಿ 2002ರ ಅಂತ್ಯದೊಳಗೆ ಆನ್‌ಲೈನ್ ಮಾಡುವ ವ್ಯವಸ್ಥೆ ಮಾಡಲಾಗಿದೆ.

3. 54.00 ಲಕ್ಷ ರೂ.ಗಳು

4. ಹಾವೇರಿ ಜಿಲ್ಲೆಗೆ ಯೋಜನೆ ಪೂರ್ಣಗೊಳಿಸಲು ಬೇಕಾಗಿರುವ ಅಂದಾಜು ಮೊತ್ತ 10.00 ಲಕ್ಷ ರೂ.ಗಳು.

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿರುವ ಸರ್ವಜ್ಞನ ಜನ್ಮಸ್ಥಳ ಅಬಲೂರ ಗ್ರಾಮವನ್ನು ಅಭಿವೃದ್ಧಿಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 689(1236)

ಸದಸ್ಯರ ಹೆಸರು : ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಉತ್ತರಿಸುವ ಸಚಿವರು : ಶ್ರೀ ಆರ್.ರೋಷನ್ ಬೇಗ್(ಪ್ರವಾಸೋದ್ಯಮ ಹಾಗೂ ಹಜ್ ಸಚಿವರು)

ಪ್ರಶ್ನೆ

ಅ) ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕಿನ ಅಬಲೂರು ಗ್ರಾಮ ಸರ್ವಜ್ಞನ ಜನ್ಮಸ್ಥಳದ ಅಭಿವೃದ್ಧಿಗೆ ಸರ್ಕಾರ ಯೋಚಿಸಿದೆಯೇ?

ಆ) ಅಬಲೂರಿನ ವರಕವಿ ಸರ್ವಜ್ಞನ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರ ನೀಡುವುದು?

ಇ) ಈವರೆಗೆ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳದಿದ್ದಲ್ಲಿ, ಈಗಲಾದರೂ ಸರ್ಕಾರ ಸಮಾನ ದೃಷ್ಟಿಯಿಂದ ಸರ್ವಜ್ಞನ ಜನ್ಮಸ್ಥಳದ ಅಭಿವೃದ್ಧಿಗೆ ಕಾರ್ಯಕ್ರಮ ಹಾಕಿಕೊಳ್ಳಲು ಉದ್ದೇಶಿಸಿದೆಯೇ?

ಈ) ಈ ಬಗ್ಗೆ ಸರ್ಕಾರದ ನೀತಿ ಏನು?

ಉತ್ತರ

ಅ) ಸರ್ಕಾರವು ಪ್ರಸ್ತುತ ಸಾಲಿನಲ್ಲಿ ಅಲೂರು ಗ್ರಾಮದ ಅಭಿವೃದ್ಧಿಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹೊಸದಾಗಿ ನಿರ್ಮಾಣಗೊಂಡ ಜಿಲ್ಲೆಗಳ ಅಭಿವೃದ್ಧಿ ಕೆಲಸಗಳ ವಿವರ.

ಚುಕ್ಕೆ ಗುರುತಿಲ್ಲದ LA ಪ್ರಶ್ನೆ ಸಂಖ್ಯೆ : 690(1237)

ಸದಸ್ಯರ ಹೆಸರು : ಶ್ರೀ ಬನ್ನಿಕೋಡ್ ಬಿ.ಹೆಚ್.(ಹಿರೇಕೆರೂರು)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1. ಹೊಸದಾಗಿ ನಿರ್ಮಾಣಗೊಂಡ ಜಿಲ್ಲೆಗಳೆಷ್ಟು?

2. ಹೊಸ ಜಿಲ್ಲೆಗಳಲ್ಲಿ ಆಡಳಿತದ ಅನುಕೂಲತೆಗಾಗಿ ಕೈಗೊಂಡ ಅಭಿವೃದ್ಧಿ ಕೆಲಸಗಳ ವಿವರ ನೀಡುವುದು?

3. ಹಾವೇರಿ ಜಿಲ್ಲೆ ಹೊಸದಾಗಿ ಪ್ರಾರಂಭಗೊಂಡಿದ್ದರೂ ಆಡಳಿತದ ಅನುಕೂಲತೆಗಾಗಿ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಲಾಗಿದೆಯೇ?

4. ಪ್ರಾರಂಭಿಸದೇ ಇದ್ದಲ್ಲಿ ಕಾರಣಗಳೇನು? ಈಗಲಾದರೂ ಕೂಡಲೇ ಜಿಲ್ಲಾ ಆಡಳಿತಕ್ಕೆ ಅವಶ್ಯವಿರುವ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

5. ಈ ಬಗ್ಗೆ ಸರ್ಕಾರದ ನೀತಿ ಏನಾದರೂ ಇದೆಯೇ?